ರಾಜ್ಯದಲ್ಲಿ ಮುಜರಾಯಿ ಇಲಾಖೆಯಿಂದ ವಿವಿಧ ದೇವಸ್ಥಾನಗಳಿಗೆ ಬಿಡುಗಡೆ ಮಾಡಿರುವ ಹಣ

608 (1014) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಈ ವರ್ಷ ಮುಜರಾಯಿ ಇಲಾಖೆಯಿಂದ ವಿವಿಧ ದೇವಸ್ಥಾನಗಳಿಗೆ ಬಿಡುಗಡೆ ಮಾಡಲಾದ ಹಣ ಎಷ್ಟು; (ಜಿಲ್ಲಾವಾರು ವಿವರ ನೀಡುವುದು);

ಆ) ಮುಜರಾಯಿ ಇಲಾಖೆಗೆ ಬಜೆಟ್‌ನಲ್ಲಿ ನಿಗಧಿಪಡಿಸಿದ್ದ ಹಣ ಎಷ್ಟು; ಬಿಡುಗಡೆ ಮಾಡಿದ ಹಣ ಎಷ್ಟು?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು) :

ಅ) ಪ್ರಸಕ್ತ ವರ್ಷದಲ್ಲಿ ರಾಜ್ಯದ ದೇವಾಲಯಗಳಿಗೆ ಅನುದಾನ ಬಿಡುಗಡೆ ಮಾಡಿರುವುದಿಲ್ಲ. 2003 ಮಾರ್ಚ್ ಅಂತ್ಯದೊಳಗಾಗಿ ಮುನ್ನ ಬಿಡುಗಡೆ ಮಾಡಲಾಗುವುದು.

ಆ) ಮುಜರಾಯಿ ಇಲಾಖೆಯ ಆಯವ್ಯಯದಲ್ಲಿ ನಿಗಧಿಪಡಿಸಿದ ಹಣದ ವಿವರ ಕೆಳಕಂಡಂತಿರುತ್ತದೆ.

	ಯೋಜನೆಗಳು	ನಿಗಧಿ ಪಡಿಸಿದ ಮೊತ್ತ
1)	ದುರಸ್ಥಿ / ಜೀರ್ಣೋದ್ಧಾರ	ರೂ. 300.00 ಲಕ್ಷ
2)	ನವ ನಿರ್ಮಾಣ / ಕಲ್ಯಾಣ ಮಂಟಪ	ರೂ. 300.00 ಲಕ್ಷ
3)	ಆರಾಧನಾ ಯೋಜನೆ	ರೂ. 600.00 ಲಕ್ಷ

ರಾಜ್ಯದ ಧಾರ್ಮಿಕ ಸಂಸ್ಥೆಗಳಿಗೆ ವಿವಿಧ ಯೋಜನೆಗಳಡಿ ಈವರೆವಿಗೆ ಈ ಕೆಳಕಂಡಂತೆ ಆರ್ಥಿಕ ಇಲಾಖೆಯಿಂದ ಒದಗಿಸಲಾಗಿದೆ.

1.	ದುರಸ್ತಿ ಯೋಜನೆ	250.00 ಲಕ್ಷ
2.	ನಿರ್ಮಾಣ ಯೋಜನೆ	92.50 ಲಕ್ಷ
3.	ಆರಾಧನಾ ಯೋಜನೆ	300.00 ಲಕ್ಷ

ರಾಜ್ಯದಲ್ಲಿ ಗ್ರಾಮ ಸಹಾಯಕ ಖಾಯಂಗೊಳಿಸುವಿಕೆ

609 (1015) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಗ್ರಾಮ ಸಹಾಯಕರ ಸಂಖ್ಯೆ ಎಷ್ಟು; ಜಿಲ್ಲಾವಾರು ಮಾಹಿತಿ ನೀಡುವುದು

ಆ) ಇವರುಗಳನ್ನು ಖಾಯಂಗೊಳಿಸುವ ಬಗ್ಗೆ ಸರ್ಕಾರದ ನಿಲುವೇನು? ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ;

ಇ) ಸದರಿ ಗ್ರಾಮ ಸಹಾಯಕರುಗಳಿಗೆ ನೀಡುತ್ತಿರುವ ಮಾಸಿಕ ವೇತನವೆಷ್ಟು?

ಶ್ರೀ ಹೆಚ್. ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) 9665

ಜಿಲ್ಲಾವಾರು ಮಾಹಿತಿ ಅನುಬಂಧ 1 ರಲ್ಲಿದೆ.

ಆ) ಪ್ರಕರಣ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇದೆ.